**ಸಾಕ್ಷಿಯನ್ನು ದಿನಾಂಕ 12.03.2026 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ನಾನೇ ಸಹಿ ಮಾಡಿರುತ್ತೇನೆ.

ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ನಿ.ಪಿ.1, ಪ್ರಥಮ ವರ್ತಮಾನ ಮಾಹಿತಿಯ ದೃಢೀಕೃತ ನಕಲನ್ನು ನಿ.ಪಿ.2, ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು ನಿ.ಪಿ.3, ಅಮಾನತು ಪಂಚನಾಮೆಯ ದೃಢೀಕೃತ ನಕಲನ್ನು ನಿ.ಪಿ.4, ವಾಹನ ತಪಾಸಣಾ ವರದಿಯ ದೃಢೀಕೃತ ನಕಲನ್ನು ನಿ,ಪಿ.5, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿ.ಪಿ.6, ಅಂತಿಮ ವರದಿಯ ದೃಢೀಕೃತ ನಕಲನ್ನು ನಿ.ಪಿ.7, ಡಿಸ್ಚಾರ್ಜ್ ಸಮ್ಮರಿ ಅನ್ನು ನಿ.ಪಿ.8, ವೈದ್ಯಕೀಯ ಬಿಲ್ಲುಗಳನ್ನು ಒಟ್ಟಾಗಿ ನಿ.ಪಿ.9, ಆಧಾರ ಕಾರ್ಡಿನ ನೋಟರೈಜಡ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಮೂಲ ಪ್ರತಿಯೊಂದಿಗೆ ಹೋಲಿಕೆ ಮಾಡಿ ನಿ.ಪಿ.10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರು ಏಕಪಕ್ಷೀಯವಾಗಿದ್ದು, 1 ನೇ ಎದುರುದಾರರು ಅರ್ಜಿಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿ/-

,

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ
ಧಾರವಾಡ.